ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE:

### ಇಂದಿನಿಂದ ವಿಧಾನಮಂಡಲ ಅಧಿವೇಶನ । ಅತೃಪ್ತರ ಬೇಗುದಿ, ಖಾತೆ ಕ್ಯಾತೆ, ರೈತರ ಆಕ್ರೋಶ, ಗೋಹತ್ಯೆ ನಿಷೇಧ ಚರ್ಚೆ

# ಆಡಳಿತ, ಪ್ರತಿಪಕ್ಷಗಳ ಮಾತಿನ ಮಲ್ಲಯುದ್ಧಕ್ಕೆ ವೇದಿಕೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕೇಂದ್ರದ 3 ನೂತನ ಕೃಷಿ ಕಾಯ್ದೆಗಳ ವಿರುದ್ಧ ಅನ್ನದಾತರ ಆಕ್ರೋಶ, ಸಚಿವ ಸ್ಥಾನ ಹಾಗೂ ನಿರೀಕ್ಷಿತ ಖಾತೆ ವಂಚಿತರ ಅತೃಪ್ತಿಯ ಬೇಗುದಿ ಮಧ್ಯೆ ವಿಧಾನಮಂಡಲದ ಅಧಿವೇಶನ ಗುರುವಾರ ಆರಂಭವಾಗಲಿದ್ದು, ಆಡಳಿತ ಹಾಗೂ ಪ್ರತಿಪಕ್ಷಗಳ ಮಾತಿನ ಮಲ್ಲಯುದ್ಧಕ್ಕೆ ವೇದಿಕೆ ಸಜ್ಜಾಗಿದೆ.

ಸಚಿವ ಸಂಪುಟ ವಿಸ್ತರಣೆ, ಖಾತೆಗಳ ಹಂಚಿಕೆ ನಂತರ ಭುಗಿಲೆದ್ದ ಅಸಮಾಧಾನ ತಣ್ಣಗಾದಂತೆ ಮೇಲ್ನೋಟಕ್ಕೆ ಕಂಡುಬರುತ್ತಿದೆ. ಆದರೂ ಸಚಿವ ಸ್ಥಾನ ವಂಚಿತರು ಆಗಾಗ್ಗೆ ಎತ್ತುತ್ತಿರುವ ಅಪಸ್ವರ, 4 ಬಾರಿ ಖಾತೆಗಳ ಮರುಹಂಚಿಕೆ ಬಳಿಕ ತಗ್ಗದ ಅತೃಪ್ತರ ಬೇಗುದಿ ಅಧಿವೇಶನವನ್ನು ಕಾಡುವ ಸಾಧ್ಯತೆಗಳಿವೆ.


ಶಿವಮೊಗ್ಗದ ಹುಣಸೋಡು ಕಲ್ಲು ಗಣಿ ಸ್ಫೋಟದ ಅನಾಹುತವು ಸದನದಲ್ಲಿ ಪ್ರತಿಧ್ವನಿಸಿ, ಅಕ್ರಮ ಗಣಿಗಾರಿಕೆ ಸದ್ದು ಮಾಡಲಿದೆ. ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ತೀವ್ರ ವಾಕ್ಸಮರಕ್ಕೂ ಕಾರಣವಾಗುವ ಲಕ್ಷಣಗಳಿವೆ. ಮಹಾರಾಷ್ಟ್ರ ಸಿಎಂ ಉದ್ಧವ್ ಠಾಕ್ರೆ ಮತ್ತೆ ಹೊತ್ತಿಸಿದ ಗಡಿ ಕಿಡಿಯು ಪಕ್ಷಭೇದ ಮರೆತು ತೀವ್ರ ಆಕ್ಷೇಪ, ಆಗ್ರಹದ ನಿರ್ಣಯ ತಿರುವು ಪಡೆಯಬಹುದು.

**ಪ್ರತಿಪಕ್ಷಗಳ ಪ್ರಮುಖಾಸ್ತ್ರ:** ಅತೃಪ್ತರ ಬೇಗುದಿ, ಸುಗ್ರೀವಾಜ್ಞೆ ಮೂಲಕ ಗೋಹತ್ಯೆ ನಿಷೇಧ ಜಾರಿ, ಕರೊನಾ ವೈಫಲ್ಯ, ಪ್ರವಾಹ ಸಂತ್ರಸ್ತರಿಗೆ ಇನ್ನೂ ಸಿಗದ ಪರಿಹಾರ, ಭ್ರಷ್ಟಾಚಾರದ ಆರೋಪಗಳು, ಸಿಎಂ ಹಾಗೂ ಸಚಿವರ ವಿರುದ್ಧ ನ್ಯಾಯಾಲಯದ ಮುಂದಿರುವ ಪ್ರಕರಣಗಳು ಪ್ರತಿಪಕ್ಷ ಕಾಂಗ್ರೆಸ್‌ನ ಪ್ರಮುಖ ಅಸ್ತ್ರಗಳಾಗಿದ್ದು, ಸರ್ಕಾರವನ್ನು ಹಣಿಯಲು ಸಜ್ಜಾಗಿದೆ. ಬಿ.ಸಿ. ಪಾಟೀಲ್, ಆರ್.ಅಶೋಕ್ ಸೇರಿ ಕೆಲ ಸಚಿವರ ಆಪ್ತ ಶಾಖೆಯ ಸಿಬ್ಬಂದಿ ಲಂಚಕ್ಕೆ ಬೇಡಿಕೆ ಸಲ್ಲಿಸಿದ ವಿಚಾರಗಳು ಸಾಕಷ್ಟು ಚರ್ಚೆಗೆ ಒಳಪಡುವ ನಿರೀಕ್ಷೆ ಇದೆ. ಆದರೆ ಜೆಡಿಎಸ್‌ನ ನಡೆ ಏನೆಂದು ಇನ್ನೂ ಸ್ಪಷ್ಟವಾಗಿಲ್ಲ. ವಿಷಯಾಧಾರಿತ ಬೆಂಬಲದ ನಿಲುವು ಮುಂದುವರಿಸಲಿದೆಯೇ ಎಂಬ ಪ್ರಶ್ನೆಯೂ ಕುತೂಹಲಕ್ಕೆ ಕಾರಣವಾಗಿದೆ.

ವಿಪಕ್ಷಗಳ ಸವಾಲು, ಕಾವೇರಿ ಚರ್ಚೆಗೆ ತಕ್ಕ ಉತ್ತರ ನೀಡಲು ಸರ್ಕಾರ ಸಜ್ಜಾಗಿದೆ. ಮೊದಲ ಬಾರಿಗೆ ಪೂರ್ಣಪ್ರಮಾಣದ ತಂಡದೊಂದಿಗೆ ಸಿಎಂ ಬಿಎಸ್‌ವೈ ಅಧಿವೇಶನ ಎದುರಿಸಲಿದ್ದಾರೆ. ಕೇಂದ್ರ ಸರ್ಕಾರದಿಂದ ಹೆಚ್ಚಿನ ನೆರವು ಸಿಕ್ಕಿದ್ದನ್ನು ಅಂಕಿ-ಅಂಶಗಳೊಂದಿಗೆ ವಿವರಿಸಿ ಸಮರ್ಥಿಸಿಕೊಳ್ಳಲಿದೆ.

### ಸಭಾಪತಿ ವಿರುದ್ಧ ಅವಿಶ್ವಾಸ

**ವಿಧಾನಪರಿಷತ್‌ನಲ್ಲಿ ಸಭಾಪತಿ ಕೆ. ಪ್ರತಾಪಚಂದ್ರ ಶೆಟ್ಟಿ ವಿರುದ್ಧ ಮತ್ತೆ ಅವಿಶ್ವಾಸ ಮಂಡನೆಗೆ ವೇದಿಕೆ ಸಜ್ಜಾಗಿದೆ. ಬಹುತೇಕ ಉಪ ಸಭಾಪತಿ ಆಯ್ಕೆ ನಂತರ ಪ್ರತಾಪಚಂದ್ರಶೆಟ್ಟಿ ರಾಜೀನಾಮೆ ನೀಡುವ ಸಾಧ್ಯತೆಗಳಿವೆ.**



## 7 ದಿನದ ಕಲಾಪ, 11 ವಿಧೇಯಕ ಮಂಡನೆ

**ಬೆಂಗಳೂರು:** ಜನವರಿ 28ರಿಂದ ಆರಂಭವಾಗುವ ಅಧಿವೇಶನದಲ್ಲಿ ಮಂಡನೆ, ಅಂಗೀಕಾರಕ್ಕೆ ಬಾಕಿ ಇರುವ 11 ವಿಧೇಯಕಗಳ ಚರ್ಚೆಗೆ ಅವಕಾಶ ನೀಡಲಾಗುತ್ತದೆ ಎಂದು ಸಭಾಧ್ಯಕ್ಷರು ತಿಳಿಸಿದರು. ಫೆ.5ರವರೆಗೆ ಒಟ್ಟು 7 ದಿನಗಳ ಕಾಲ ಅಧಿವೇಶನ ನಡೆಯಲಿದೆ. ಮೊದಲ ದಿನ ಉಭಯ ಸದನಗಳ ಜಂಟಿ ಅಧಿವೇಶನವನ್ನುದ್ದೇಶಿಸಿ ರಾಜ್ಯಪಾಲ ವಜೂಭಾಯಿ ವಾಲಾ ಭಾಷಣ ಮಾಡಲಿದ್ದಾರೆ. ಈ ಬಾರಿ 6 ದಿನಗಳನ್ನು ಪ್ರಶ್ನೋತ್ತರ ಕಲಾಪಗಳಿಗಾಗಿ ಮೀಸಲು ಇರಿಸಲಾಗಿದೆ. ಒಂದು ದೇಶ ಒಂದು ಚುನಾವಣೆ ವಿಷಯವನ್ನೂ ಚರ್ಚಿಸಲು ನಿರ್ಧರಿಸಲಾಗಿದೆಂದರು.

**ಯಾವ್ಯಾವ ವಿಧೇಯಕ?**

ಶ್ರೀ ಜಗದ್ಗುರು ಮುರುಘರಾಜೇಂದ್ರ ವಿವಿ, ವಿದ್ಯಾಶಿಲ್ಪ ವಿವಿ, ಏಟ್ರಿಯಾ ವಿವಿ, ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ), ಲೋಕಾಯುಕ್ತ (3ನೇ ತಿದ್ದುಪಡಿ), ಮೋಟಾರು ವಾಹನಗಳ ತೆರಿಗೆ, ಸಾಂಕ್ರಾಮಿಕ ರೋಗಗಳು, ತೋಟಗಾರಿಕೆ ವಿಜ್ಞಾನಗಳ ವಿವಿ (ತಿದ್ದುಪಡಿ) ವಿಧೇಯಕಗಳು ಚರ್ಚೆಗೆ ಬರಲಿದೆ. ಸುಗ್ರೀವಾಜ್ಞೆ ಮೂಲಕ ಜಾರಿ ಮಾಡಿರುವ ನಗರಪಾಲಿಕೆಗಳ ವಿಧೇಯಕ, ನಗರಪಾಲಿಕೆಗಳ ಮತ್ತು ಇತರ ಕೆಲವು ಕಾನೂನು (2ನೇ ತಿದ್ದುಪಡಿ) ವಿಧೇಯಕ, ಪೌರಸಭೆಗಳ (ನಾಲ್ಕನೇ ತಿದ್ದುಪಡಿ) ವಿಧೇಯಕ ಮಂಡನೆಯಾಗಲಿದೆ. ಗೋಹತ್ಯೆ ನಿಷೇಧ ಕಾಯ್ದೆ ಮತ್ತು ಲವ್ ಜಿಹಾದ್ ಕಾಯ್ದೆ ಕುರಿತು ಈ ಹಂತದಲ್ಲಿ ಯಾವುದೇ ಪ್ರಸ್ತಾಪವಿಲ್ಲ.